ವಿಜಯವಾಣಿ Pg. 02, 06/12/2016

**ಸುದ್ದಿ ಕಾರ್ನರ್**

## ಇಂದು ನಗರದ ಹಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವ್ಯಾಪ್ತಿಯ ಸೇಂಟ್‌ಜಾನ್ ವುಡ್ 66/11 ಕೆವಿ ಸಬ್ ಸ್ಟೇಷನ್‌ನಲ್ಲಿ ದುರಸ್ತಿ ಕೆಲಸಗಳಿರುವ ಕಾರಣ ಮಂಗಳವಾರ (ಡಿ.6) ಬೆಳಗ್ಗೆ 10 ರಿಂದ ಸಂಜೆ 4 ಗಂಟೆ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.




ಮಡಿವಾಳ, ಮಾರುತಿನಗರ, ಎಸ್.ಜಿ. ಪಾಳ್ಯ, ಕ್ಯಾಪಿಯರ್ ಬಡಾವಣೆ, ಭವಾನಿ ನಗರ, ಸೇಂಟ್‌ಜಾನ್ ವುಡ್ ಅಪಾರ್ಟ್‌ಮೆಂಟ್, ಒರಾಕಲ್, ಕೇಂದ್ರೀಯ ಸದನ, ತಾವರೆಕೆರೆ ಮುಖ್ಯ ರಸ್ತೆ, ಸಿದ್ಧಾರ್ಥ ಕಾಲನಿ, ಗುರಪ್ಪ ಬಡಾವಣೆ, ವೆಂಕಟೇಶ್ವರ ಬಡಾವಣೆ, ಹೊಸೂರು ಮುಖ್ಯ ರಸ್ತೆ, ಬಿಟಿಎಂ ಬಡಾವಣೆ, ಬಾಲಾಜಿ ನಗರ, ಕೃಷ್ಣ ನಗರ ಬಡಾವಣೆ, ಭುವನಪ್ಪ ಬಡಾವಣೆ, ಬಿಸ್ಮಿಲ್ಲಾ ನಗರ ಬಡಾವಣೆ, ಕೋರಮಂಗಲ 2ನೇ ಹಂತ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ವ್ಯತ್ಯಯವಾಗಲಿದೆ.

Kannada Prabha

## ತಾತ್ಕಾಲಿಕ ಪಟ್ಟಿ ಪ್ರಕಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಡಿ.3ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಕನ್ನಡ ಭಾಷಾ ಪರೀಕ್ಷೆಯ ಅಂಕಗಳ ತಾತ್ಕಾಲಿಕ ಪಟ್ಟಿ ಪ್ರಕಟಗೊಂಡಿದೆ.

ಅಭ್ಯರ್ಥಿಗಳು ಮಾಹಿತಿಗಾಗಿ ಕೆಇಎ ವೆಬ್‌ಸೈಟ್ **http://kea.kar.nic.in** ಗೆ ಭೇಟಿ ನೀಡಬಹುದು ಎಂದು ಕೆಇಎ ಪ್ರಕಟಣೆ ತಿಳಿಸಿದೆ.

Page 09 Hosa Digantha

## ವಿದ್ಯುತ್ ಸ್ಪರ್ಶ: ಓರ್ವ ಸಾವು

ಕೆಜಿಎಫ್: ವಿದ್ಯುತ್ ಸ್ಪರ್ಶದಿಂದಾಗಿ ವ್ಯಕ್ತಿಯೋರ್ವ ಸಾವನ್ನಪ್ಪಿ, ಇರ್ವರು ತೀವ್ರವಾಗಿ ಗಾಯಗೊಂಡ ಘಟನೆ ಸೋಮವಾರ ಸ್ಕೂಲ್ ಆಫ್ ಮೈನ್ಸ್ ಬಳಿ ನಡೆದಿದೆ.

ತಿಮ್ಮಾಪುರದ ನಿವಾಸಿ ಪ್ರಸಾದ್ (32)ಸಾವನ್ನಪ್ಪಿದ ವ್ಯಕ್ತಿ, ಮಂಜುನಾಥ್, ಎನ್.ಜಿ.ಹುಲ್ಕೂರು ಗ್ರಾಮದ ಶಿವು ಎಂಬುವರು ತೀವ್ರವಾಗಿ ಗಾಯಗೊಂಡವರು. ಗಾಯಾಳುಗಳನ್ನು ಕೋಲಾರದ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಕೂಲ್ ಆಫ್ ಮೈನ್ಸ್ ಬಳಿ ವಿದ್ಯುತ್ ಕಂಬ ಬದಲಾಯಿಸುತ್ತಿದ್ದ ವೇಳೆ ಇದ್ದಕ್ಕಿಂದತೆ ವಿದ್ಯುತ್ ಪ್ರವಹಿಸಿದಾಗ ಪ್ರಸಾದ್ ಸ್ಥಳದಲ್ಲೇ ಮೃತಪಟ್ಟರು. ವಿಷಯ ತಿಳಿದ ಉರಿಗಾಂ ಪೊಲೀಸರು ತಕ್ಷಣ ಸ್ಥಳಕ್ಕೆ ಆಗಮಿಸಿ ತಮ್ಮ ಜೀಪಿನಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿದರು. ಉರಿಗಾಂ ಪೊಲೀಸರು ಪ್ರಕರಣ ದಾಖಲು ಮಾಡಿದ್ದಾರೆ.